ದಿವಾಳಿಯಾದ ಡಿಕ್ರಿ ದೇಣಿದಾರ ಮೈಸೂರು ಮುಂಡಿ ಮೊಹಲ್ಲಾದಲ್ಲಿರುವ ಬುರಾನೊರ್ದಿಸಾಬರ ವಿಷಯದಲ್ಲಿ—

ಸ್ಯ 1894—95ನೇ ಇಸವಿ ದಿವಾಳಿ ಕೇಸ್ ನಂಬರು 38.

ಹುಕುಂ,

ಮೇಲ್ಕಂಡ ಬುರಾನೊರ್ದಿಸಾಬರು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜಿದಾರರಾದ ಬುರಾನೊರ್ದಿಸಾಬರ ಪರವಾಗಿ ಅಡ್ವೊಕೇಟ್ ಮೆಸ್ಸರ್ ರಾಜಾರಾಯರನ್ನೂ ಮತ್ತು ಸದರೀಯವರ ಲೇಣೇದಾರರಾದ 1 ಸಾವಲ್‌ದಾಸ್ ಜಶಾನಂದಸೇಟರ ತರಫ್ ಅಡ್ವೊಕೇಟ್ ಮೆಸ್ಸರ್ ಚಂದ್ರಶೇಖರಯ್ಯನವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾಕಂದರೆ—2ನೇ ಲೈಫ್ ಇನ್‌ಷೂರೆನ್ಸ್ ಬ್ಯಾಂಕ್, 3ನೇ ಸಾಹುಕಾರ್ ವೀರಣ್ಣ, 4ನೇ ಸಾಲೆಮಹಮ್ಮದ್‌ಸೇಟ್, 5ನೇ ದೇವೀರಮ್ಮ, 6ನೇ ಚವುಡಪ್ಪ, 7ನೇ ದವಾಜಿಕಾಜಿಸೇಟ್, 8ನೇ ಅನಂತರಾಮಯ್ಯಂಗಾರ್, 9ನೇ ಜಮಾಲ್‌ಸಾಬ್, 10ನೇ ವೀರಪ್ಪ, 11ನೇ ಸುಬ್ಬರಾಜೆಅರಸ್, 12ನೇ ವರದಾಚಾರ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಬುರಾನೊರ್ದಿಸಾಬರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಉತ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1895ನೇ ಇಸವಿ ಮಾರ್ಚಿ 20ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ,

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೆಸ್ಕಿ ಸ್ಥಿಂತುಪದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಪರಾ.
1	ಮೈಸೂರಲ್ಲಿರುವ ಸಾವಲ್‌ದಾಸ್ ಜಶಾನಂದಸೇಟರು	1,100—0—0			
2	ಮೈಸೂರ್ ಲೈಫ್‌ಇನ್‌ಷೂರೆನ್ಸ್ ಬ್ಯಾಂಕ್ ..	1,100—0—0			
4	ಡಿಟೋ ಸಾಲೆಮಹಮ್ಮದ್‌ಸೇಟರು ..	300—0—0			
5	ಡಿಟೋ ದೇವೀರಮ್ಮ ..	350—0—0			
		2,850—0—0			

ಎಂ. ರಾಮಸ್ವಾಮಯ್ಯರ್,
ಸಬ್ ಜಡ್ಜ.

ಹಾಸನ ಡಿಸ್ಟ್ರಿಕ್ಟ್.

ಮಂಜರಾಬಾದ್ ತಾಲ್ಲೂಕು.

ತಾರೀಖು 20ನೇ ಮಾರ್ಚಿ ಸ್ಯ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಂಜರಾಬಾದ ತಾಲ್ಲೂಕು ಉದೇವಾರ ಗ್ರಾಮದಲ್ಲಿ ಇರುವ ಇದರಿಂದ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ಯ 1895ನೇ ಇಸವಿ ಮೇ ತಾರೀಖು 27ನೇ ಸೋಮವಾರ ಹಗಲು 11 ಘಂಟೆಗೆ ಹಾಸನದ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಮುಂಜೂರಾತಿಗೆ ವಳಪಡಿಸಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ಸಕಲೇಶಪುರ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಪರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರ್ರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು, ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡ್ವವ ಆಖ್ಯೆರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮ್ಮಿ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮ್ಮಿ ದರಖಾಸ್ತು ದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಕೇಕಡಾ 25 ರೂಪಾಯಿಗಳ ಮೇರೆ ಆಗುವ